(ಶ್ರೀ ಎಚ್. ಎಂ. ಚನ್ನಬಸಪ್ಪ)

ಪುದಿಲ್ಲ, 20 ಹಳ್ಳಿಗಳವರು ಇಲ್ಲಿಗೆ ಹೋಗುವುದಿಲ್ಲ ಎನ್ನುವ ವಿವಾದಕ್ಕೆ ಒಳಗಾಗಿರುವುದರಿಂದ ಕೆಲಸ ಕಾರ್ಯಗಳನ್ನು ನಡೆಸಲು ತೊಂದರೆಯಾಗಿದೆ. ಈ ಬಗ್ಗೆ ಮಾನ್ಯ ಸದಸ್ಯರೂ ಸಹಕರಿಸಿದರೆ ಈ ಕೆಲಸಗಳು ಇನ್ನೂ ಬೇಗನೆ ಆಗಲು ಅವಕಾಶವಾಗುತ್ತದೆ.

Sri B. V. DESAI.—Do the facilities which are being proposed for these 4 villages of the Raichur District which have not been rehabilitated as yet conform to the facilities granted by the previous Governments to the other villages which have been rehabilitated or is there any deviation?

Sri H. M. CHANNABASAPPA.—We do not make any deviation in respect of any village and we will not discriminate.

Dr. R. NAGAN GOWDA.—Are there any villages for which compensation has not been paid as yet?

Sri H. M. CHANNABASAPPA.—I cannot tell you straight away. In most of the villages compensation has been paid. There may be some cases where compensation has not been paid. We have made arrangements for payment of compensation quickly.

Dr. R. NAGAN GOWDA.—In view of the fact that these villages will be submerged during the flood season 1960, will Government take steps to pay compensation for each one of them and shift them before their houses are submerged in water?

Sri H. M. CHANNABASAPPA.—Government will make all efforts to pay compensation and also to shift them. Unless the people also co-operate in shifting the village, it would be difficult for Government to effect complete rehabilitation. So, I look upon the Hon'ble Member putting the question to help us in this matter.

ಶ್ರೀ ಎಂ. ಎಂ. ಪಾಟೀಲ್.—ಜನಗಳು ಸಹಕಾರ ಮಾಡುವುದಕ್ಕೆ ಮುಂದೆ ಬರುತ್ತಿದ್ದಾರೆ. ಅವರಿಗೆ ಜಮೀನುಗಳನ್ನು ಕೊಟ್ಟಿಲ್ಲ. ಅದರಿಂದ ಅವರು ಜೀವನ ಮಾಡುವುದು ಕಷ್ಟವಾಗಿದೆ ಎನ್ನುವುದು ಸರಕಾರಕ್ಕೆ ಗೊತ್ತಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಷಿಫ್ಟ್ ಮಾಡುವುದು ಮೊದಲನೆಯದು, ಜಮೀನನ್ನು ಕೊಡತಕ್ಕದ್ದು ಎರಡನೆಯ ವಿಷಯ. ಮಾನ್ಯ ಸದಸ್ಯರು ಹೇಳಿದಂತೆ 1630-35ರ ಮಟ್ಟದವರೆಗೆ ಮುಳುಗಡೆಯಾಗಿರತಕ್ಕ ಜಮೀನಿನವರಿಗೆ ಪುನರ್ವಸತಿ ಮಾಡತಕ್ಕದ್ದು ಮೊಟ್ಟ ಮೊದಲನೆಯದಾಗಿರತಕ್ಕದ್ದು, ಭೂಮಿಯನ್ನು ಕೊಡತಕ್ಕದ್ದು ಎರಡನೆಯದು. ಪುನರ್ವಸತಿ ಮಾಡುವುದಕ್ಕೆ ಸರ್ಕಾರದವರು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದಾರೆ; ಭೂಮಿಯನ್ನು ಕೊಡುವುದಕ್ಕೆ, ಕಾಂಪೆನ್‌ಸೇಷನ್‌ನನ್ನು ಕೊಡುವುದಕ್ಕೆ ಏರ್ಪಾಡುಮಾಡಲಾಗಿದೆ. ಇಂತಹ ಕಡೆಯಲ್ಲಿ ಭೂಮಿ ಇದೆ ಎಂದು ಕೇಳಿದರೆ ಒಂದು ವೇಳೆ ಅಂತಹ ಕಡೆಗಳಲ್ಲಿ ಭೂಮಿ ಇದ್ದರೆ ಅದನ್ನು ಕೂಡ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಎಂ. ಪಾಟೀಲ್.—ಸರ್ಕಾರದವರು ಹೊರಡಿಸಿರುವ ಗವರ್ನಮೆಂಟ್ ಆರ್ಡರಿನಲ್ಲಿ 19 ಐಟಂಗಳನ್ನು ಉಲ್ಲೇಖಿಸಿ ಅವರುಗಳಿಗೆಲ್ಲ ಅನುಕೂಲಗಳನ್ನು ಒದಗಿಸಿಕೊಡುತ್ತೇವೆಂದು ಹೇಳಲಾಗಿದೆ. ಇದರಲ್ಲಿ ಐಟಂ 3, 5, 6, 10, 12, 14 ಮತ್ತು 19 ಇವುಗಳ ಬಗ್ಗೆ ಯಾವ Rehabilitation ಕ್ರಮವನ್ನೂ ಕೈಗೊಂಡಿಲ್ಲ. ಈ ಗ್ರಾಮಗಳಿಗೆ ಭೂಮಿಯನ್ನು ಕೊಟ್ಟಿಲ್ಲ. ಆದಷ್ಟು ತೀವ್ರವಾಗಿ ಈ ಬಗ್ಗೆ ಭೂಮಿ ಕೊಡಲಿಕ್ಕೆ ಸರಕಾರ ಪ್ರಯತ್ನಿಸುವುದೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಆಜ್ಞೆಯನ್ನು ಹೊರಡಿಸಿದ ಕೆಲವು ತಿಂಗಳಿನಲ್ಲಿಯೇ ಮುಖ್ಯವಾಗಿ ಯಾವ ಯಾವ ಅನುಕೂಲಗಳನ್ನು ಕೊಡಬೇಕೆಂದು ಹೇಳಲಾಗಿದೆಯೋ ಅದರಂತೆ ಕೊಡುವುದಕ್ಕೆ ಅಭ್ಯಂತರ ವೇನಿಲ್ಲ. ಎಲ್ಲ ಅನುಕೂಲಗಳನ್ನೂ ಏಕಕಾಲದಲ್ಲಿ ಮಾಡುವುದು ಕಷ್ಟ. ಇವುಗಳನ್ನೆಲ್ಲ ಪರಿಶೀಲಿಸಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಯಾವ ಯಾವ ಕೆಲಸಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

———

Repairs to Road passing through Harijan Colony in Derebailu Village.

*Q.—273. **Sri MANJAPPA ULLAL** (Karkal).—

Will the Government be pleased to state:—

(*a*) whether they are aware of the fact that the road passing through the Kottor Harijan Colony in Derebailu village, Mangalore Taluk, is in a very bad condition;

(*b*) the steps taken by them to widen and repair the above road?

A.—**Sri T. SUBRAMANYA** (Minister for Law, Labour and Local Self-Government).—

(*a*) No.

(*b*) Metal has been collected for black-topping the road.

ಶ್ರೀ ಮಂಜಪ್ಪ ಉಳ್ಳಾಲ್.—ಈ ರೋಡಿಗೆ ಎಸಿ ಮೆಟ್ಟು ಆಗಿದೆಯೇ?

†ಶ್ರೀ ಟಿ. ಸುಬ್ರಹ್ಮಣ್ಯ.—ಇದು ಸರಕಾರಿ ರೋಡೂ ಅಲ್ಲ, ಡಿಸ್ಟ್ರಿಕ್ಟ್ ಬೋರ್ಡಿನ ರೋಡೂ ಅಲ್ಲ, ಇದು ಮುನಿಸಿಪಾಲಿಟಿಯವರಿಗೆ ಸೇರಿದ ರೋಡು. ಇದನ್ನು ಮಾಡುವುದು ಮುನಿಸಿಪಾಲಿಟಿಯವರ ಜವಾಬ್ದಾರಿ.

ಶ್ರೀ ಮಂಜಪ್ಪ ಉಳ್ಳಾರ್.—ಇದು ಮುನಿಸಿಪಲ್ ರೋಡು ಅಲ್ಲ. ಇದನ್ನು ಪರಿಶೀಲನುತ್ತೀರಾ?

ಶ್ರೀ ಟಿ. ನುಬ್ರಹ್ಮಣ್ಯ.—ನಿಮಗೆ ವಿವರಗಳು ಬೇಕಾದರೆ ಓದಿ ಹೇಳುತ್ತೇನೆ. I shall read the information that is with me. Kotta Harijan colony in Derebailu Village is between 2/6 and 3/6 of Mangalore Baindur Coast Road. The road in question is a cross road connecting Mangalore-Baindur Coast Road and Mangalore-Kinnigoil Road. The road is maintained by the Mangalore Municipality and is already metalled. The road requires widening. The Deputy Commissioner, South Kanara, reports that action has been taken to widen the road.

Muzrai Temples in the State.

*Q.—291. Sri T. HANUMIAH (Challakere).—

Will the Government be pleased to state:—

(*a*) the number of Muzrai temples in the State;

(*b*) the number of Archakas working at present in these temples;

(*c*) whether they intend to appent Harijan Archakas to these Muzrai temples up to 18 per cent as per Government Order?

A.—Sri KADIDAL MANJAPPA (Minister for Revenue).—

Areas		*Total*
(*a*) Old Mysore Area	...	15,747
Hyderabad Area	...	7,265
Coorg Area	...	10
Madras	...	2,578

Bombay area. Information is being collected.

(*b*) The exact number is not readily ascertainable. Generally, there is one archak for one temple. More importmant institutions have several Archaks.

(*c*) While appointing Archaks, hereditary rights, local customs and wishes of the disciples have to taken be into account.

ಶ್ರೀ ಟಿ. ಹನುಮಯ್ಯ.—ದೇವಾಲಯಗಳಲ್ಲಿರುವ ಅರ್ಚಕರು ಬ್ರಹ್ಮಚಾರಿಗಳೋ ಅಥವಾ ಗೃಹಸ್ಥರೋ?

†ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಬ್ರಹ್ಮಚಾರಿಗಳು ಇದ್ದಾರೆ, ಕೆಲವರು ಗೃಹಸ್ಥರೂ ಇದ್ದಾರೆ.

ಶ್ರೀ ಟಿ. ಹನುಮಯ್ಯ.—ಪೂಜಾರಿಗಳು ವಂಶ ಪಾರಂಪರ್ಯವಾಗಿ ಬಂದಿರುವ ಒಂದೇ ಕೋಮಿಗೆ ಸೇರಿದವರೋ ಇಲ್ಲವೇ ಬೇರೆಯವರೂ ಇದ್ದಾರೆಯೋ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರೂ ಇದ್ದಾರೆ.

ಶ್ರೀ ಟಿ. ಹನುಮಯ್ಯ.—ಹಾಗಿದ್ದರೆ ಎಲ್ಲ ಹಿಂದು ಗಳ ಮಕ್ಕಳಿಗೂ ಅದರಲ್ಲಿಯೂ ಹರಿಜನರ ಮಕ್ಕಳಿಗೆ ಒಂದು ಪೂಜಾರಿಗಳ ಟ್ರೈನಿಂಗ್ ಕ್ಯಾಂಪ್ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಕಾನೂನಿಲ್ಲ. ಆ ರೀತಿ ತಾವು ಕಾನೂನು ಮಾಡಿಸಿಕೊಟ್ಟರೆ ಮಾಡುತ್ತೇವೆ.

Sri M. MALLIKARJUNASWAMY.—May I know from the Hon'ble Minister, whether the Government is aware if the revenues of the Muzrai Temples have dwindled after the entry of Harijans into these temples?

Mr. SPEAKER.—That question does not arise.

Sri M. MALLIKARJUNASWAMY.—May I know from the Government whether this job is a remunerative one?

Mr. SPEAKER.—That is a different question. It is not relevant here.

ಶ್ರೀ ಜಿ. ಪೆಂಕಟೇಗೌಡ.—ಕೇರಳದಲ್ಲಿ ಹರಿಜನರ ದೇವಸ್ಥಾನಗಳ ಪೂಜಾರಿಗಳು ಅಲ್ಲಿನ ಕಮ್ಯೂನಿಸ್ಟರ ಹಾವಳಿ ಜಾಸ್ತಿಯಾದ್ದರಿಂದ ಪೂಜೆಮಾಡುವುದನ್ನೇ ಬಿಟ್ಟಿದ್ದಾರೆಂಬುದು ನಿಜವೇ?

ಅಧ್ಯಕ್ಷರು.—ಅದು ನಿಮಗೇ ಗೊತ್ತಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ರಾಜ್ಯದ ಮುಜರಾಯಿ ದೇವಾಲಯಗಳಿಗೆ ಪೂಜಾರಿಯಾಗ ಬೇಕಾದರೆ ಅವರಿಗೆ ಏನಾದರೂ ಸ್ಪೆಷಲ್ ಕ್ವಾಲಿಫಿಕೇಷನ್ಸ್‌ನ್ನು ಪ್ರಿಸ್ಕ್ರೈಬ್ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಪರಂಪರೆಗನುಗುಣವಾಗಿ ಕೆಲವು ಅರ್ಹತೆಗಳು ಅವರಿಗೆ ಇರಬೇಕಾಗಿವೆ. ಕೆಲವು ದೇವಸ್ಥಾನಗಳಲ್ಲಿ ಶೈವಾಗಮ, ವೈಷ್ಣವಾಗಮ—ಇತ್ಯಾದಿ ಆಗಮಶಾಸ್ತ್ರಗಳನ್ನು ಕಲತಿರತಕ್ಕ ಪೂಜಾರಿಗಳು ಇರಬೇಕಾಗಿದೆ.

ಶ್ರೀ ಟಿ. ಹನುಮಯ್ಯ.—ಅರ್ಚಕರನ್ನು ನಿಯೋಜಿಸುವಾಗ ಅನುಸೂಚಿತ ಹಕ್ಕುಬಾಧ್ಯತೆಯನ್ನೂ, ವಂಶ ಪಾರಂಪರ್ಯೆಯಿಂದ ಬಂದಿರತಕ್ಕದ್ದನ್ನೂ ಗಮನಿಸಲಾಗುತ್ತದೆಂದು ಹೇಳಿದ್ದೀರಿ. ಆದರೆ ಅರ್ಚಕರ ಮಕ್ಕಳೆಲ್ಲಾ ಈಗ ಐ.ಎ.ಎಸ್. ಆಫಿಸರುಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಆಗಿದ್ದಾರೆ.

ಶ್ರೀ ಟಿ. ಹನುಮಯ್ಯ.—ಆದುದರಿಂದ ಹರಿಜನರಿಗೆ ಅರ್ಚಕರ ಕೆಲಸ ಕೊಟ್ಟರೆ, ಹೆಚ್ಚಿಗೆ ಅವರ ಮಕ್ಕಳೂ ಸಹ ಐ.ಎ.ಎಸ್. ಆಫೀಸರುಗಳಾಗುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?